# ಅಲ್ಲೊಂದು ಹಕ್ಕಿ, ಇಲ್ಲೊಂದು ಮುಗುಳು...



ಪ್ಯಾರಿಸ್‌ನಲ್ಲಿ ನಡೆದ ಒಲಿಂಪಿಕ್ ಕೂಟದ ಉದ್ಘಾಟನೆ ಸಮಾರಂಭದಲ್ಲಿ ಐಫೆಲ್ ಟವರ್‌ನಲ್ಲಿ ನಡೆದ ಲೇಸರ್ ಲೈಟ್ ಪ್ರದರ್ಶನ ಕಣ್ಮನ ಸೆಳೆಯಿತು.
ಚಿತ್ರ: ಕೆ.ಎನ್. ಶಾಂತಕುಮಾರ್

**ಪ್ಯಾರಿಸ್ ಒಲಿಂಪಿಕ್ಸ್‌ನಲ್ಲಿ ಭಾರತ ಆರು ಪದಕಗಳನ್ನಷ್ಟೇ ಗಳಿಸಿದರೂ, ನಮ್ಮ ಕ್ರೀಡಾಪಟುಗಳ ಸಾಧನೆ ಕಳಪೆಯೇನಲ್ಲ. ಕೆಲವು ಕ್ರೀಡಾಪಟುಗಳಿಗೆ ಕೈಗೆ ಬಂದ ತುತ್ತು ಬಾಯಿಗೆ ಬರಲಿಲ್ಲ. ಸೋಲಿನ ನಡುವೆಯೂ ಹೊರಹೊಮ್ಮಿದ ಕ್ರೀಡಾಸ್ಫೂರ್ತಿ ಹಾಗೂ ಛಲ ಬಹುಕಾಲ ನೆನಪಿನಲ್ಲಿ ಉಳಿಯುವಂತಹದ್ದು.**

■ ಪ್ರಮೋದ ಕುಲಕರ್ಣಿ

ಪದಕ ಗೆದ್ದವರ ಖುಷಿ, ಆರಂಭದಲ್ಲಿಯೇ ಸೋತವರ ಬೇಸರ, ಪದಕದ ಸಮೀಪ ಬಂದು ಮುಗ್ಗರಿಸಿದವರಲ್ಲಿ ಕಾಡಿದ ನೋವು, ತೂಕದ ಕಾರಣಕ್ಕಾಗಿ ಅನುಭವಿಸಿದ ಯಾತನೆ –ಹೀಗೆ ಏಳುಬೀಳುಗಳನ್ನು ಪ್ಯಾರಿಸ್ ಒಲಿಂಪಿಕ್ಸ್‌ನಲ್ಲಿ ಭಾರತೀಯ ಕ್ರೀಡಾಪಟುಗಳು ಎದುರಿಸಬೇಕಾಯಿತು.

ವಿಶ್ವದ ಸರ್ವಶ್ರೇಷ್ಠ ಕ್ರೀಡಾಕೂಟ ಒಲಿಂಪಿಕ್ಸ್‌ನಲ್ಲಿ ಪಾಲ್ಗೊಳ್ಳಲು ಅರ್ಹತೆ ಪಡೆದುಕೊಳ್ಳುವುದೇ ಸಾಧನೆ. ಇಂಥ ಸಾಧನೆ ಮಾಡಿದ 117 ಅಥ್ಲೀಟ್‌ಗಳು ಪ್ಯಾರಿಸ್‌ನಲ್ಲಿ ದೇಶದ ಘನತೆ ಎತ್ತಿ ಹಿಡಿದರು. ಪ್ರತಿ ಬಾರಿ ಒಲಿಂಪಿಕ್ಸ್ ಆರಂಭವಾಗುವ ಮೊದಲು 'ಭಾರತಕ್ಕೆ ಈ ಬಾರಿ ಎಷ್ಟು ಪದಕ' ಎನ್ನುವ ಪ್ರಶ್ನೆ ಎದುರಾಗುತ್ತದೆ. ಅನೇಕ ಚರ್ಚೆಗಳು ನಡೆಯುತ್ತವೆ. ಬಹುತೇಕರದ್ದು ಎರಡಂಕಿಯ ಒಳಗೇ ಪದಕ ಎನ್ನುವ ಉತ್ತರವಿರುತ್ತದೆ. ಇದು ಸತ್ಯವೂ ಹೌದು.

ಭಾರತೀಯ ಕ್ರೀಡಾಪಟುಗಳ ಸಾಮರ್ಥ್ಯವನ್ನು ಅವರ ಅಭಿಮಾನಿಗಳು, ಕ್ರೀಡಾತಜ್ಞರು ಚೆನ್ನಾಗಿಯೇ ಅರಿತುಕೊಂಡಿದ್ದಾರೆ. ಆದರೆ ಈ ಬಾರಿ ಎರಡಂಕಿಯ ಸಂಖ್ಯೆಯಲ್ಲಿ ಪದಕಗಳನ್ನು ಗೆಲ್ಲಲು ಅವಕಾಶವಿತ್ತು. ಒಂದು ಬೆಳ್ಳಿ ಹಾಗೂ ಐದು ಕಂಚು ಸೇರಿ ಆರು ಪದಕಗಳನ್ನು ಗೆದ್ದುಕೊಳ್ಳಲಷ್ಟೇ ಸಾಧ್ಯವಾಯಿತು. ಇಷ್ಟೇ ಸಂಖ್ಯೆಯಲ್ಲಿ ಭಾರತ ಪದಕಗಳನ್ನು ಕಳೆದುಕೊಂಡಿತು. ಪದಕದ ಸಮೀಪ ಬಂದವರು ಅದನ್ನು ಕೊರಳಿಗೆ ಧರಿಸುವಂತಾಗಿದ್ದರೆ ಹಿಂದಿನ ಎಲ್ಲ ಒಲಿಂಪಿಕ್ಸ್‌ಗಳ ದಾಖಲೆ ಅಳಿಸಿಹೋಗುತ್ತಿತ್ತು.

ಹಿಂದಿನ ಎಲ್ಲ ಕ್ರೀಡಾಕೂಟಗಳಿಗಿಂತ ಹೆಚ್ಚು ಸಂಖ್ಯೆಯ ಸ್ಪರ್ಧೆಯಲ್ಲಿ ದಾಖಲೆ ಮಾಡಿದ್ದ ಶೂಟಿಂಗ್‌ನಲ್ಲಿ ಭಾರತ ಮೊದಲ ಪದಕ ಗೆದ್ದುಕೊಂಡಿತು. ಮನು ಭಾಕರ್ ಕಂಚು ಜಯಿಸುವ ಮೂಲಕ ಶೂಟಿಂಗ್‌ನಲ್ಲಿ ಈ ಸಾಧನೆ ಮಾಡಿದ ದೇಶದ ಮೊದಲ ಮಹಿಳಾ ಶೂಟರ್ ಎನ್ನುವ ಹೆಗ್ಗಳಿಕೆ ಪಡೆದುಕೊಂಡರು. 10 ಮೀಟರ್ ಏರ್ ಪಿಸ್ತೂಲ್, ಇದೇ ವಿಭಾಗದ ಮಿಶ್ರ ತಂಡದಲ್ಲಿ ಮನು ಭಾಕರ್ ಅವರು ಸರಬ್ಜೋತ್ ಸಿಂಗ್ ಜೊತೆಗೆ ಕಂಚು ಜಯಿಸಿ 25 ಮೀ. ಪಿಸ್ತೂಲ್ ಸ್ಪರ್ಧೆಯಲ್ಲಿ ನಾಲ್ಕನೇ ಸ್ಥಾನ ಪಡೆದುಕೊಂಡರು. ದೇಶದ ಸ್ವಾತಂತ್ರ್ಯ ನಂತರ ಒಂದೇ ಒಲಿಂಪಿಕ್ಸ್‌ನಲ್ಲಿ ಎರಡು ಪದಕಗಳನ್ನು ಗೆದ್ದ ಮೊದಲ ಭಾರತೀಯ ಕ್ರೀಡಾಪಟು ಎನ್ನುವ ಗೌರವಕ್ಕೆ ಭಾಜನರಾದರು. ಸ್ವಪ್ನಿಲ್ ಕುಸಾಲೆ ಶೂಟಿಂಗ್‌ನಲ್ಲಿ ಕಂಚು,




ನೀರಜ್ ಚೋಪ್ರಾ